**ಕವಿತೆ**




## ವಸುಂಧರಾ ಕದಲೂರು

ಕಲೆ: ರೂಪಶ್ರೀ ಕಲ್ಲಿಗನೂರು




# ಗಾಳಿಚೀಲ

ನಮ್ಮ ಪೂರ್ವಿಕರು ತಂತಮ್ಮ
ತಲೆ ಹೆಗಲು ಸೊಂಟಗಳಲಿ
ಹೊರುತ್ತಿದ್ದ ಮಣಭಾರದ
ಚೀಲಗಳು ಮಾರ್ಪಾಟಾಗಿವೆ

ಅವುಗಳೀಗ ಗಾಳಿಯಷ್ಟು ಹಗುರದ
ಗಾಲಿಬ್ಯಾಗುಗಳಾಗಿ ನಂನಮ್ಮ
ವರ್ತಮಾನಗಳ ಹೊತ್ತು ತಿರುಗುತ್ತಿವೆ

ಪೂರ್ವಜರ ಮಣಭಾರದ ಜವಾಬ್ದಾರಿ
ಹೊರಬೇಕಿಲ್ಲ, ನಮ್ಮ ಸ್ವಾರ್ಥದ
ಗಾಲಿಚೀಲಗಳ ಎಳೆದು ತಳ್ಳಿದರಾಯ್ತು
ಶ್ರಮಪಡದೆ ಶ್ರಮಕೊಡದೆ ಸಾಗುತ್ತವೆ

ನಮ್ಮೊಡನೆ ಸಾಗುವೀ ಗಾಲಿಚೀಲಗಳು
ಭೂತದ ಸಂಗ್ರಹವಲ್ಲ ಭವಿಷ್ಯದ
ಉಗ್ರಾಣಗಳಂತೂ ಅಲ್ಲವೇ ಅಲ್ಲ
ಈ ಹೊತ್ತಿನ ತುತ್ತಿನ ಚೀಲಗಳಿವು

ಬೇರುಬಿಡದ ಹಕ್ಕಿಯಂತೆ ಹಗುರಾಗಿ
ನಮ್ಮ ಆಗಸದಲ್ಲೇ ಹಾರಬಯಸುವಾಗ
ಭಾರದ ಚೀಲ ಒಯ್ಯುತ್ತೇವೆಯೇ; ಮೈಮನದ
ಕಸುವು ಅಜ್ಜಿಅಜ್ಜಂದಿರ ತಾಕತ್ತಾದರೂ
ನಮ್ಮಲ್ಲಿ ಅರೆಬರೆ ಉಳಿದಿದೆಯೇ